**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ಮತ್ತು ಶ್ರೀ ಮರಿತಿಬ್ಬೇಗೌಡ, ಇವರುಗಳು ನಿಯಮ 330 ರಡಿ ಪ್ರಸ್ತಾಪಿಸಿರುವ "ರಾಜ್ಯದಲ್ಲಿ ಇತ್ತೀಚೆಗೆ ಚಿರತೆ, ಆನೆ ಮತ್ತು ಕಾಡು ಹಂದಿಗಳ ಹಾವಳಿಯಿಂದ ಬೆಳೆ ಹಾನಿ ಹಾಗೂ ಸಾರ್ವಜನಿಕರಿಗೆ ಪ್ರಾಣಹಾನಿ ಹೆಚ್ಚಾಗಿದ್ದು, ವಿದ್ಯಾರ್ಥಿಗಳು ಶಾಲೆಗೆ ತೆರಳಲು ಭಯಭೀತರಾಗಿದ್ದು, ರೈತರಿಗೆ ಹಾಗೂ ಜನಸಾಮಾನ್ಯರು ತುಂಬಾ ಆತಂಕದಲ್ಲಿರುವ ಗಂಭೀರ ಸಮಸ್ಯೆ ಕುರಿತು" ಗಮನ ಸೆಳೆಯುವ ಸೂಚನೆಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.**

******

ರಾಜ್ಯದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಅದರಲ್ಲೂ ಮುಖ್ಯವಾಗಿ ಕಾಡಾನೆ ಹಾವಳಿಯಿಂದ ಬೆಳೆಹಾನಿ, ಮಾನವ-ಪ್ರಾಣಹಾನಿ, ಮಾನವ-ಗಾಯ, ಸಾಕುಪ್ರಾಣಿ ಹತ್ಯೆ ಮತ್ತು ಆಸ್ತಿ ನಷ್ಟ ಪ್ರಕರಣಗಳು ಉಂಟಾಗುತ್ತಿದ್ದು, ಅದನ್ನು ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ.

**ರಾಜ್ಯದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-**

1. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.

2. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಿರ್ಮಾಣ ಮಾಡಿರುವ ಬ್ಯಾರಿಕೇಡ್ ವಿವರ ಈ ಕೆಳಕಂಡಂತಿದೆ.

**(ವಿಸ್ತೀರ್ಣ: ಕಿ.ಮೀ.ಗಳಲ್ಲಿ)**

| ಕಾಮಗಾರಿ ವಿವರ | 2019-20 | 2020-21 | 2021-22 |
|---|---|---|---|
| ಆನೆ ತಡೆ ಕಂದಕ ನಿರ್ಮಾಣ / ನಿರ್ವಹಣೆ | 281.04 | 189.82 | 291.06 |
| ಸೌರಶಕ್ತಿ ಬೇಲಿ ನಿರ್ಮಾಣ / ಮತ್ತು ನಿರ್ವಹಣೆ | 352.62 | 372.31 | 381.25 |
| ಉಪಯೋಗಿತ ರೈಲ್ವೆ ಹಳಿಗಳನನು ಉಪಯೋಗಿಸಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ | 65.488 | 33.81 | 35.63 |

ಪ್ರಸಕ್ತ ಸಾಲಿನಲ್ಲಿ 150.95 ಕಿ.ಮೀ. ಆನೆ ತಡೆ ಕಂದಕ ನಿರ್ಮಾಣ / ನಿರ್ವಹಣೆ, 285.88 ಕಿ.ಮೀ. ಸೌರಶಕ್ತಿ ಬೇಲಿ ನಿರ್ಮಾಣ / ಮತ್ತು ನಿರ್ವಹಣೆ ಮತ್ತು 71.768 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

3. ಕಾಡಾನೆಗಳನ್ನು ಹಿಮ್ಮೆಟ್ಟಿಸಲು 95 ಕಾಡಾನೆ ಹಿಮ್ಮೆಟ್ಟಿಸುವ ತಂಡ (ADC) ಹಾಗೂ 33 ಕ್ಷಿಪ್ರ ಸ್ಪಂದನ ತಂಡ (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.

4. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಕಂಟ್ರೋಲ್ ರೂಮ್ ಸ್ಥಾಪಿಸಲಾಗಿದೆ.

5. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿದ ವಿವರ:

| ವರ್ಷ | ರೇಡಿಯೋ ಕಾಲರ್ ಅಳವಡಿಕೆ |
|---|---|
| 2020-21 | 07 |
| 2021-22 | 12 |
| 2022-23 | 03 |

6. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಸೂಕ್ತ ಆವಾಸ ಸ್ಥಾನ / ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿರುವ ವಿವರ ಈ ಕೆಳಕಂಡಂತಿದೆ:-

| ವರ್ಷ | ಸೆರೆ ಹಿಡಿದು ಸ್ಥಳಾಂತರಿಸಿದ ಸಂಖ್ಯೆ |
|---|---|
| 2020-21 | 18 |
| 2021-22 | 19 |
| 2022-23 | 21 |

7. ಪ್ರಸ್ತುತ ಸರ್ಕಾರವು ದಿನಾಂಕ: 21.11.2022 ರ ಆದೇಶದಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ ಆನೆ ಕಾರ್ಯಪಡೆ (Elephant Task Force) ಅನ್ನು ಹಾಸನ ಜಿಲ್ಲೆಯ ಸಕಲೇಶಪುರ ಕೇಂದ್ರ ಸ್ಥಾನದಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಕೇಂದ್ರ ಸ್ಥಾನದಲ್ಲಿ, ಮೈಸೂರು ಜಿಲ್ಲೆಯ ಹುಣಸೂರು ಕೇಂದ್ರ ಸ್ಥಾನದಲ್ಲಿ ಮತ್ತು ಕೊಡಗು ಜಿಲ್ಲೆಯ ಮಡಿಕೇರಿ ಕೇಂದ್ರ ಸ್ಥಾನದಲ್ಲಿ ರಚಿಸಲಾಗಿದೆ. ಅದರನ್ವಯ ಆನೆ ಕಾರ್ಯಪಡೆ ರಚನೆಯಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆ.

**<u>ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು</u> ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-**

- ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ತಮ್ಮ ವಿಭಾಗಗಳಲ್ಲಿ 3-4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲಾಗುತ್ತಿದೆ.
- ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲು ಮತ್ತು ಚಿರತೆ ಹಿಡಿಯಲು ಬೇಕಾದ ಬೋನು, Tranquilizer Gun ಮತ್ತಿತರೆ ಉಪಕರಣಗಳನ್ನು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

...3

- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳು ಚಿರತೆ ಹಾವಳಿ ಇರುವ ಪ್ರದೇಶಕ್ಕೆ ಭೇಟಿ ನೀಡಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಲ್ಲದೇ, ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡುವಂತೆ ರಾಜ್ಯದ ಎಲ್ಲಾ ಅರಣ್ಯ ಸಂರಕ್ಷಣಾಧಿಕರಿಗಳಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 311 ಎಫ್‌ಇಜಿ 2022(ಇ), ದಿನಾಂಕ: 31.01.2023 ರ ಆದೇಶದಲ್ಲಿ ಮೈಸೂರು ವೃತ್ತದ ಮೈಸೂರು / ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಈ ಕೆಳಕಂಡ ಸಿಬ್ಬಂದಿಗಳನ್ನು ಒಳಗೊಂಡಂತೆ ಚಿರತೆ ಕಾರ್ಯ ಪಡೆ (Leopard Task Force) ಯನ್ನು ರಚಿಸಲಾಗಿದೆ.

| ಕ್ರ. ಸಂ | ಹುದ್ದೆ | ಸಂಖ್ಯೆ |
|---|---|---|
| 1 | ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು (Leopard Task Forece) ತಂಡದ ಮುಖ್ಯಸ್ಥರು. | |
| 2 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಉಪ ವಿಭಾಗ, ಮೈಸೂರು | |
| 3 | ವಲಯ ಅರಣ್ಯ ಸಂರಕ್ಷಣಾಧಿಕಾರಿ | 1 |
| 4 | ಉಪ.ವಲಯ ಅರಣ್ಯ ಸಂರಕ್ಷಣಾಧಿಕಾರಿ | 4 |
| 5 | ಗಸ್ತು ಅರಣ್ಯ ಪಾಲಕರು | 8 |
| 6 | Leopard Task Forece ಸಹಾಯಕರು (ಹೊರ ಗುತ್ತಿಗೆ ನೌಕರರು) | 40 |
| 7 | ವಾಹನ ಚಾಲಕರು (ಹೊರ ಗುತ್ತಿಗೆ) | 5 |
| | ಒಟ್ಟು | **58** |

ಸದರಿ ಚಿರತೆ ಕಾರ್ಯಪಡೆಯ ಕಾರ್ಯಾಚರಣೆಗಾಗಿ 05 ವಾಹನ ಮತ್ತು ಅಗತ್ಯ ಪರಿಕರಗಳನ್ನು ಒದಗಿಸಿಕೊಟ್ಟು ಹೊರಗುತ್ತಿಗೆ ಆಧಾರದ ಮೇಲೆ 40 ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ.

ವನ್ಯಪ್ರಾಣಿಗಳ ಹಾವಳಿ ಇರುವ ಸೂಕ್ಷ್ಮ ಪ್ರದೇಶ ವಿರಾಜಪೇಟೆ ವ್ಯಾಪ್ತಿಯಲ್ಲಿ ಶಾಲಾ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಲು ಮತ್ತು ವಾಪಾಸ್ಸು ಕರೆತರಲು ಬಾಡಿಗೆ ಆಧಾರದಲ್ಲಿ ವಾಹನಗಳ ವ್ಯವಸ್ಥೆ ಮಾಡಲಾಗಿದೆ.

ಹಾಸನ ಜಿಲ್ಲೆಯ ಕಾಡಂಚಿನ ಗ್ರಾಮಗಳ ಸೂಕ್ಷ್ಮ ಪ್ರದೇಶದಲ್ಲಿರುವ ಶಾಲಾ ಮಕ್ಕಳಿಗೆ ಶಾಲೆಗೆ ಹೋಗಿ ಬರಲು ಅನಿವಾರ್ಯ ಸಂದರ್ಭಗಳಲ್ಲಿ ಇಲಾಖಾ ಕ್ಷಿಪ್ರ ಪಡೆ ವಾಹಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

...4

ಮಲೈಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಪಾಲಾರ್ ವನ್ಯಜೀವಿ ವಲಯದ ಕಾಡಂಚಿನ ಗ್ರಾಮಗಳಾದ ಪಾಲಾರ್, ತೋಕೆರೆ, ಪಡಸಲನತ್ತ, ತುಳಸಿಕೆರೆ, ದೊಡ್ಡಾಣೆ ಇತ್ಯಾದಿ ಹಾಗೂ ಹನೂರು ವಲಯದ ಕಾಡಂಚಿನ ಗ್ರಾಮವಾದ ಪಚ್ಚೇದೊಡ್ಡಿ ಗ್ರಾಮಗಳ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದು, ರೋಗಿಗಳು, ಗರ್ಭಿಣಿಯರು, ಶಾಲಾ ಮಕ್ಕಳು, ಶಿಕ್ಷಕರು, ಆಹಾರ ಸಾಮಗ್ರಿ ಸರಬರಾಜು ಹಾಗೂ ಸಾರ್ವಜನಿಕರಿಗಾಗಿ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಚಾಮರಾಜನಗರ ಜಿಲ್ಲಾಧಿಕಾರಿಯವರು ಸದರಿ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು **"ಜನವನ ಸೇತುವೆ"** ಎಂಬ ನಾಲ್ಕು ಗೂರ್ಕ ವಾಹನ (Force Motor's Company) ಗಳನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಿಂದ ನೀಡಲಾಗಿದ್ದು, ಸದರಿ ವಾಹನಗಳನ್ನು ಮೇಲೆ ತಿಳಿಸಿದ ಕಾಡಂಚಿನ ಗ್ರಾಮಗಳಲ್ಲಿ ಸಾರ್ವಜನಿಕ ಸಾರಿಗೆ, ಪಡಿತರ ವಾಹನ, ಆಂಬುಲೆನ್ಸ್ ಹಾಗೂ ಶಾಲಾ ವಾಹನ ಮಾದರಿಯಲ್ಲಿ ಉಪಯೋಗಿಸಲಾಗುತ್ತಿದೆ. ಸದರಿ ವಾಹನಗಳನ್ನು ಪರಿಸರ ಅಭಿವೃದ್ಧಿ ಸಮಿತಿ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಮಾನವ ಗಾಯ, ಬೆಳೆಹಾನಿ, ಜಾನುವಾರು ಹತ್ಯೆ, ಆಸ್ತಿ ನಷ್ಟಗಳಿಗೆ ಪಾವತಿಸಿರುವ ದಯಾತ್ಮಕ/ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:-

(ರೂ.ಲಕ್ಷಗಳಲ್ಲಿ)

| ಕ್ರ ಸಂ | ವಿವರ | 2020-21 | | 2021-22 | |
|---|---|---|---|---|---|
| | | ಪ್ರಕರಣ | ಪಾವತಿಸಿದ ಮೊತ್ತ | ಪ್ರಕರಣ | ಪಾವತಿಸಿದ ಮೊತ್ತ |
| 1 | ಮಾನವ ಪ್ರಾಣಹಾನಿ | 37 | 277.5 | 40 | 264.69 |
| 2 | ಶಾಶ್ವತ ಅಂಗವಿಕಲತೆ | 4 | 16.47 | 6 | 15.5 |
| 3 | ಮಾನವ ಗಾಯ | 195 | 99.92 | 230 | 124.7 |
| 4 | ಬೆಳೆ ಹಾನಿ | 24740 | 1421.93 | 31255 | 1843.1 |
| 5 | ಜಾನುವಾರು ಹತ್ಯೆ | 3019 | 242.94 | 4052 | 399.84 |
| 6 | ಆಸ್ತಿ ನಷ್ಟ | 504 | 30.11 | 1307 | 71.16 |
| 7 | ಮಾಸಾಶನ ಮಾನವ ಪ್ರಾಣ ಹಾನಿ ಮತ್ತು ಶಾಶ್ವತ ಅಂಗವಿಕಲತೆ | 61 | 14.25 | 92 | 22.72 |
| | ಒಟ್ಟು | 28560 | 2103.12 | 36982 | 2741.71 |

ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು ದಿನಾಂಕ:15-12-2022ರಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡವರಿಗೆ ಹಾಗೂ ಆಸ್ತಿಪಾಸ್ತಿ ನಷ್ಟ ಪ್ರಕರಣಗಳಲ್ಲಿ ನೀಡುತ್ತಿರುವ ಪರಿಹಾರ ಧನ ಮತ್ತು ಮಾಸಾಶನ ಧನವನ್ನು ಕೆಳಕಂಡಂತೆ ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

...5

| ಕ್ರ. ಸಂ | ಪ್ರಕರಣಗಳ ವಿವರ | ಪ್ರಸ್ತುತ ನೀಡಲಾಗುತ್ತಿರುವ ದಯಾತ್ಮಕ ಧನ | ನಿಗಧಿಪಡಿಸಲಾದ ದಯಾತ್ಮಕ ಧನ |
|---|---|---|---|
| 1 | ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳು | ರೂ.7.50 ಲಕ್ಷ | ರೂ.15.00 ಲಕ್ಷ |
| 2 | ಕಾಡುಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.5.00 ಲಕ್ಷ | ರೂ.10.00 ಲಕ್ಷ |
| 3 | ಕಾಡು ಪ್ರಾಣಿಯಿಂದ ಉಂಟಾಗುವ ಭಾಗಶಃ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.2.50 ಲಕ್ಷ | ರೂ.5.00 ಲಕ್ಷ |
| 4 | ಕಾಡು ಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ಮೊತ್ತ ಪ್ರಕರಣಗಳು | ರೂ.30,000/- | ರೂ.60,000/- |
| 5 | ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ | ರೂ.10,000/- | ರೂ.20,000/- |
| 6 | **ಮಾಸಾಶನ:** ವನ್ಯಪ್ರಾಣಿಗಳ ದಾಳಿ / ಹಾವಳಿಯಿಂದ ಉಂಟಾಗುವ ಮಾನವ-ಪ್ರಾಣಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಹಾಗೂ ಶಾಶ್ವತ ಅಂಗವಿಕಲತೆಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿರುವ ದಯಾತ್ಮಕ ಧನದ ಜೊತೆಗೆ ಪ್ರತಿ ತಿಂಗಳಂತೆ 5 ವರ್ಷಗಳವರೆಗೆ ಮಾಸಾಶನ | ರೂ.2,000/- | ರೂ.4,000/- |

ಮುಂದುವರೆದು, ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ: 19.09.2016 ರಲ್ಲಿ ನಿಗಧಿಪಡಿಸಿರುವ ಪರಿಹಾರ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 18.01.2023 ರಲ್ಲಿ ಪರಿಷ್ಕರಿಸಿ ದ್ವಿಗುಣಗೊಳಿಸಲಾಗಿದೆ.

**ಇ-ಸಂಖ್ಯೆ: ಅಪಜೀ 26 ಎಫ್‌ಡಬ್ಲ್ಯೂಎಲ್ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ